ಕರ್ನಾಟಕ ಸರ್ಕಾರ
ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ

☎ 080 – 29753051
directorfbish@gmail.com
www.esuraksha.karnataka.gov.in

ನಿರ್ದೇಶಕರ ಕಛೇರಿ,
2ನೇ ಮಹಡಿ, ಕಲ್ಯಾಣ-ಸುರಕ್ಷಾ ಭವನ,
ಡೈರಿ ವೃತ್ತ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-29

ಸಂ: ಎಲ್‌ಜಿಎಲ್-2/ಇತರೆ/ಸಿಆರ್-01/2024-25 ದಿ: 06-04-2024

## ಸುತ್ತೋಲೆ

ವಿಷಯ : ಸಾರ್ವತ್ರಿಕ ಲೋಕಸಭೆ ಚುನಾವಣೆ-2024, ಮತದಾನದ ದಿನಾಂಕದಂದು ಅರ್ಹ ಮತದಾರರಿಗೆ ವೇತನ ಸಹಿತ ರಜೆ ಘೋಷಿಸುವ ಕುರಿತು.

ಉಲ್ಲೇಖ : ಭಾರತ ಚುನಾವಣಾ ಆಯೋಗದ ಪತ್ರ ಸಂಖ್ಯೆ 78/EPS/2024 ದಿ: 16/03/2024

******

ಭಾರತ ಚುನಾವಣಾ ಆಯೋಗವು ಸಾರ್ವತ್ರಿಕ ಲೋಕಸಭೆ ಚುನಾವಣೆ-2024 ರ ಮತದಾನದ ದಿನಾಂಕಗಳನ್ನು ಘೋಷಿಸಿದ್ದು, ದೇಶಾದ್ಯಂತ 7 ಹಂತಗಳಲ್ಲಿ ಚುನಾವಣೆ ನಡೆಸಲು ನಿರ್ಧರಿಸಿರುತ್ತದೆ ಹಾಗೂ ಕರ್ನಾಟಕದಲ್ಲಿ 2ನೇ ಹಂತ ದಿ:26/04/2024 ಹಾಗೂ 3ನೇ ಹಂತ ದಿ:07/05/2024 ರಂದು ಚುನಾವಣೆ ನಡೆಯಲಿದೆ. ಪ್ರಜಾ ಪ್ರಾತಿನಿಧ್ಯ ಕಾಯ್ದೆ, 1951 ರ ಕಲಂ 135(B) ರಡಿಯಲ್ಲಿ ಎಲ್ಲಾ ಕೈಗಾರಿಕೆಗಳಲ್ಲಿ ಕೆಲಸ ಮಾಡುತ್ತಿರುವ ಅರ್ಹ ಮತದಾರರಿಗೆ ತಮ್ಮ ತಮ್ಮ ಮತಕ್ಷೇತ್ರಗಳಲ್ಲಿ ಮತದಾನ ನಡೆಯುವ ದಿನದಂದು ಮತ ಚಲಾಯಿಸಲು ಅನುವಾಗುವಂತೆ ವೇತನ ಸಹಿತ ರಜೆ ನೀಡಲು ಪ್ರಾವಧಾನ ಕಲ್ಪಿಸಲಾಗಿರುವ ಕುರಿತು ಉಲ್ಲೇಖಿತ ಪತ್ರದಲ್ಲಿ ತಿಳಿಸಲಾಗಿದೆ. ಇದು ಎಲ್ಲಾ ಪಾಳಿಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೂ ಅನ್ವಯವಾಗುತ್ತದೆ. ಮುಂದುವರೆದು, ಸದರಿ ದಿನದ ಗೈರುಹಾಜರಿಗೆ ಯಾವುದೇ ವೇತನ ಕಡಿತ ಮಾಡದಂತೆ ಮತ್ತು ಸದರಿ ದಿನದಂದು ಕೆಲಸ ನಿರ್ವಹಿಸಿದ್ದಲ್ಲಿ ನೀಡಲಾಗುತ್ತಿದ್ದ ವೇತನವನ್ನೇ ಸದರಿ ರಜಾ ದಿನಕ್ಕೆ ನೀಡಲು ನಿರ್ದೇಶನವಿರುತ್ತದೆ. ಸದರಿ ರಜೆಯು ಅರ್ಹ ಮತದಾರರಾದ ದಿನಗೂಲಿ, ಗುತ್ತಿಗೆ ಕಾರ್ಮಿಕರು, ಎಲ್ಲಾ ವರ್ಗದ ಕಾರ್ಮಿಕರು ಹಾಗೂ ಅಧಿಕಾರಿಗಳಿಗೂ ಅನ್ವಯವಾಗುತ್ತದೆ.

ಮೇಲಿನ ಹಿನ್ನಲೆಯಲ್ಲಿ, ದೇಶಾದ್ಯಂತ ಸಾರ್ವತ್ರಿಕ ಲೋಕಸಭೆ ಚುನಾವಣೆ ನಡೆಯಲಿರುವ ದಿನಾಂಕಗಳಂದು ಕಾರ್ಖಾನೆಗಳ ಕಾಯ್ದೆ, 1948 ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕಾರ್ಖಾನೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಎಲ್ಲಾ ಅರ್ಹ ಮತದಾರ ಕಾರ್ಮಿಕರಿಗೆ ತಮ್ಮ ತಮ್ಮ ಮತಕ್ಷೇತ್ರದಲ್ಲಿ ಚುನಾವಣೆ ನಡೆಯುವ ದಿನದಂದು ಕಡ್ಡಾಯವಾಗಿ ವೇತನ ಸಹಿತ ರಜೆಯನ್ನು ನೀಡಲು ಸೂಚಿಸಿದೆ ಮತ್ತು ಸದರಿ ರಜೆಗೆ ವೇತನ ಪಾವತಿಸಲು ಸೂಚಿಸಿದೆ. ತಪ್ಪಿದಲ್ಲಿ ಪ್ರಜಾ ಪ್ರಾತಿನಿಧ್ಯ ಕಾಯ್ದೆ 1951 ರ ಉಲ್ಲಂಘನೆಯಾಗುತ್ತದೆ ಎಂದು ಈ ಮೂಲಕ ತಿಳಿಸಿದೆ.

Negotiable Instrument Act, 1881 ರ ಪ್ರಕಾರವು ಸಹ ಮತದಾನದ ದಿನಾಂಕಗಳಂದು ಸಾರ್ವತ್ರಿಕ ರಜೆಯನ್ನು ಘೋಷಿಸಿದೆ.

ಕಾರ್ಖಾನೆಯು ತುರ್ತು ಸೇವೆಯ ಉತ್ಪಾದನಾ ಕಾರ್ಯವಿಧಾನ ಹೊಂದಿದ್ದಲ್ಲಿ, ಕಾರ್ಮಿಕರ ಅನುಪಸ್ಥಿತಿಯಿಂದ ಕಾರ್ಖಾನೆಗೆ ಅಪಾಯ ಅಥವಾ ಗಣನೀಯ ನಷ್ಟ ಉಂಟಾಗುವ ಸಾಧ್ಯತೆಯಿದ್ದಲ್ಲಿ ಪರ್ಯಾಯ ವ್ಯವಸ್ಥೆಯನ್ನು ರೂಪಿಸಿ ಅಂತಹ ಕೆಲಸದಲ್ಲಿ ತೊಡಗಿರುವ ಅರ್ಹ ಮತದಾರ ಕಾರ್ಮಿಕರಿಗೆ ಮತ ಚಲಾಯಿಸಲು ಅನುಕೂಲವಾಗುವಂತೆ ಸಾಕಷ್ಟು ಕಾಲಾವಕಾಶ ಮಾಡಿಕೊಡಲು ಸೂಚಿಸಿದೆ. ಭಾರತ ಚುನಾವಣಾ ಆಯೋಗದ ನಿರ್ದೇಶನದ ಪತ್ರ ಹಾಗೂ ಚುನಾವಣಾ ವೇಳಾಪಟ್ಟಿಯ ನಕ್ಷೆಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಅದರಂತೆ ಕ್ರಮ ವಹಿಸಲು ಸೂಚಿಸಿದೆ.

ಅಡಕ : ಮೇಲಿನಂತೆ

ನಿರ್ದೇಶಕರು,
ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ
ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ, ಬೆಂಗಳೂರು.

**ಇವರಿಗೆ,**

ಎಲ್ಲಾ ಕಾರ್ಖಾನೆಗಳ ಆಡಳಿತವರ್ಗದವರಿಗೆ.